# ರಾವಣನ ಅಂತಿಮ ಸಂದೇಶ!

ಬ್ರ.ಕಿರಣ್

ಬೆಂಗಳೂರಿನ ಅಲಸೂರಿನಲ್ಲಿರುವ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿರುವ ಲೇಖಕರು ಸರಳವಾದ ಶೈಲಿಯಲ್ಲಿ ಜೀವನದ ಗುರಿಯ ಬಗ್ಗೆ ತಿಳಿಸಿಕೊಟ್ಟಿದ್ದಾರೆ.

ರಾವಣನ ಅಂತಿಮ ಸಂದೇಶ! ಎಂದು ಓದುಗರಿಗೆ ಲೇಖನದ ಹೆಸರನ್ನು ಕಂಡು ಆಶ್ಚರ್ಯವಾಗಬಹುದು. ಪರಸ್ತ್ರೀಯನ್ನು ಅಪಹರಿಸಿದಂತಹ ರಾವಣನ ಅಂತಿಮ ಸಂದೇಶವಾದರೂ ಏನಿರಬಹುದು? ಅದು ನಮಗೆ, ನಮ್ಮ ಜೀವನಕ್ಕೆ ಹೇಗೆ ಉಪಯೋಗವಾಗುವುದು? ಇತ್ಯಾದಿ ಪ್ರಶ್ನೆಗಳೆಲ್ಲ ನಿಮ್ಮ ಮನಸ್ಸಿನಲ್ಲಿ ಎದ್ದಿರಬಹುದು. ಆದರೆ ರಾವಣನು ಶ್ರೀರಾಮನಿಗೆ ಹೇಳಿದಂತಹ ಕೆಲವು ಹಿತನುಡಿಗಳು ಅದ್ಭುತವಾಗಿವೆ. ದುಷ್ಟನೂ ಕೂಡ ಅವನ ಜೀವನದ ಯಾವುದೋ ಒಂದು ಸಂದರ್ಭದಲ್ಲಿ ಅಥವಾ ಅವನ ಕೊನೆಯ ದಿನಗಳಲ್ಲಿ ಒಳ್ಳೆಯದರ ಬಗ್ಗೆ ಚಿಂತಿಸುತ್ತಾನೆ ಎನ್ನುವುದಕ್ಕೆ ಇದೊಂದು ಉದಾಹರಣೆ.

ಶ್ರೀರಾಮನ ಮತ್ತು ರಾವಣನ ನಡುವೆ ಮಹಾಯುದ್ಧವೇ ನಡೆಯಿತು. ಅದು ನಮ್ಮೆಲ್ಲರಿಗೂ ತಿಳಿದ ವಿಷಯ. ಯುದ್ಧದ ಅಂತಿಮ ಘಟ್ಟದಲ್ಲಿ, ಅಂದರೆ ಶ್ರೀರಾಮನು ರಾವಣನನ್ನು ಸೋಲಿಸಿ, ನೆಲಕ್ಕುರುಳಿಸಿದಾಗ, ರಾವಣನ ಪ್ರಾಣಪಕ್ಷಿ ಹಾರಿ ಹೋಗುವ ಸಮಯ ಬಂದಾಗ ಶತ್ರುತ್ವವನ್ನೆಲ್ಲ ಮರೆತು ಶ್ರೀರಾಮ ಮೃತ್ಯುಶಯ್ಯೆಯಲ್ಲಿದ್ದ ರಾವಣನ ಬಳಿಗೆ ಪ್ರೀತಿಯಿಂದ ಬರುತ್ತಾನೆ. ಅವನು ರಾವಣನನ್ನು ಕೇಳುತ್ತಾನೆ, "ಹೇ ರಾವಣೇಶ್ವರ, ನೀನು ವೇದ-ವೇದಾಂಗಗಳನ್ನು ತಿಳಿದವನು. ಕೈಲಾಸದಲ್ಲಿರುವಂತಹ ಶಿವನನ್ನು ಅರ್ಚಿಸಿ ಪ್ರತ್ಯಕ್ಷವಾಗಿ ನೋಡಿರುವವನು, ಲಂಕಾ ಎಂಬ ಮಹಾಸಾಮ್ರಾಜ್ಯವನ್ನು ಆಳಿರುವವನು. ಈಗ ನಾನೂ ಕೂಡ ಅಯೋಧ್ಯೆಗೆ ಮರಳಿದ ಮೇಲೆ ರಾಜ್ಯಭಾರವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ನನಗೆ ಕೆಲವು ಹಿತನುಡಿಗಳನ್ನು ಹೇಳು." ರಾಮನ ಕಲಿಯುವ ಹಂಬಲ ಹಾಗೂ ವಿನಯವನ್ನು ಈ ಘಟನೆಯಿಂದ ನಾವು ತಿಳಿಯಬಹುದು. ಎಲ್ಲ ವ್ಯಕ್ತಿಗಳಿಂದಲೂ ಸನ್ನಿವೇಶಗಳಿಂದಲೂ ಕಲಿಯುವುದು ಸಾಧ್ಯ ಎಂಬುದು ಇದರಿಂದ ತಿಳಿದುಬರುತ್ತದೆ.

ಆಗ ರಾವಣನು ಶ್ರೀರಾಮನನ್ನು ಕುರಿತು, "ಎಲೈ ಶ್ರೀರಾಮನೇ, ನಾನು ನನ್ನ ಜೀವನದಲ್ಲಿ ಒಂದೇ ಒಂದು ತಪ್ಪು ಮಾಡಿದೆ. ಅದು ನನ್ನ ಜೀವದ ವಿನಾಶಕ್ಕೆ ಕಾರಣವಾಯಿತು. ಅದೇನೆಂದರೆ, ನನ್ನಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲು, ಸಮಾಜಸೇವೆಯನ್ನು ಮಾಡಲು, ದಾನ-ಧರ್ಮಾದಿಗಳನ್ನು ಮಾಡಲು ಪ್ರಚೋದಿಸುವ ಒಳ್ಳೆಯ ಆಲೋಚನೆಗಳು, ವಿಚಾರಗಳು ಬಂದಾಗಲೆಲ್ಲ ನಾನು ಇಂದು-ನಾಳೆ ಎಂದು ಆ ಸದ್ಭಾವನೆಗಳನ್ನು ಮುಂದೂಡಿದೆ. ಆದರೆ ಕೆಟ್ಟ ಕೆಲಸಗಳನ್ನು ಮಾಡಲು ಮನಸ್ಸು ಪ್ರಚೋದಿಸಿದಾಗ 'ಶುಭಸ್ಯ ಶೀಘ್ರಂ' ಎಂದು ಆ ದಿನವೇ, ಆ ಕ್ಷಣವೇ ಮಾಡಿದೆ. ಅದೇ ನನ್ನ ವಿನಾಶಕ್ಕೆ ಕಾರಣವಾಯಿತು. ಹಾಗಾಗಿ ನೀನು ಈ ತಪ್ಪನ್ನು ಮಾಡದಿರು." ಎಂದು ಹೇಳಿ ಸಾವನ್ನಪ್ಪುತ್ತಾನೆ.

ಇಲ್ಲಿ ರಾವಣನ ಅಂತಿಮ ಸಂದೇಶ, ಕೊನೆಯ ಹಿತನುಡಿಗಳು ಎಷ್ಟು ಅರ್ಥಗರ್ಭಿತವಾಗಿವೆ ನೋಡಿ. ಪ್ರತಿಯೊಬ್ಬರೂ ಜೀವನದಲ್ಲಿ ಎದುರಿಸುವಂತಹ ಸನ್ನಿವೇಶವಿದು. ರಾವಣನ ಅಂತಿಮ ಸಂದೇಶದಂತೆ ಯಾವಾಗ ಕೆಟ್ಟ ಕೆಲಸ ಮಾಡಲು ಮನಸ್ಸು ಬಯಸುವುದೋ ಆಗ ಅದನ್ನು ನಿಗ್ರಹಿಸಿ, ವಿವೇಚನೆಯಿಂದ, ತಾಳ್ಮೆಯಿಂದ ಅಂತಹ ಕ್ರಿಯೆಗಳಿಂದ ಹಿಮ್ಮೆಟ್ಟಬೇಕು. ಹಾಗೆಯೇ ಒಳ್ಳೆಯ ಕೆಲಸವನ್ನು ಮಾಡುವ ಆಲೋಚನೆ ಬಂದಾಗ, ಅದನ್ನು ತಕ್ಷಣ ಕಾರ್ಯಗತಗೊಳಿಸಬೇಕು. ಒಳ್ಳೆಯ ಆಲೋಚನೆಗಳಿಗೆ ಕಿವಿಯೊಡ್ಡಬೇಕು. ಕೆಟ್ಟ ಆಲೋಚನೆಗಳನ್ನು ಬದಿಗಿರಿಸಬೇಕು. ಅವುಗಳ ಕಡೆ ನಿರ್ಲಕ್ಷ್ಯ ತೋರಿಸಿದಲ್ಲಿ ಅವು ತಮ್ಮ ಶಕ್ತಿ ಕಳೆದುಕೊಂಡು ಕಾಲಿಗೆ ಬುದ್ಧಿ ಹೇಳುತ್ತವೆ. ದುರ್ಗುಣಗಳು ನಮ್ಮನ್ನು ಅಯೋಗ್ಯನೆಂದು ಬೀಳ್ಕೊಟ್ಟಾಗ, ನಾವು ಯೋಗ್ಯರಾಗುತ್ತೇವೆ, ಸದ್ಗುಣಿಗಳಾಗುತ್ತೇವೆ. ಇದಕ್ಕೆ ಶ್ರೀರಾಮ ಮತ್ತು ರಾವಣರೇ ಉತ್ತಮ ಉದಾಹರಣೆ.

ಪ್ರತಿಯೊಬ್ಬರಲ್ಲೂ ಒಳ್ಳೆಯದು ಹಾಗೂ ಕೆಟ್ಟದ್ದು ಸ್ವಾಭಾವಿಕವಾಗಿ ಇರುತ್ತವೆ. ನಾವು ಯಾವುದನ್ನು ಪೋಷಿಸುತ್ತೇವೆ ಎನ್ನುವುದರ ಮೇಲೆ ನಮ್ಮ ಜೀವನದ ಗತಿ ನಿರ್ಭರವಾಗಿರುತ್ತದೆ. ಶ್ರೀರಾಮನು ಸದ್ಗುಣಗಳ ಸಾಗರನಾದ್ದರಿಂದ, ಜೀವನದಲ್ಲಿ ಅವನಿಗೆ ಕೀರ್ತಿ, ಯಶಸ್ಸು, ಜಯ ಮುಂತಾದವು ಲಭಿಸಿದವು. ಆದರೆ ರಾವಣನು ದುರ್ಗುಣಗಳನ್ನು ಪೋಷಿಸಿದ್ದರಿಂದ, ಅವನಿಗೆ ಅಪಕೀರ್ತಿ, ಅಪಜಯ, ಸೋಲು ಮುಂತಾದವು ಉಂಟಾದವು. ಕೆಟ್ಟ ಗುಣಗಳನ್ನು, ವಿಚಾರಗಳನ್ನು ತ್ಯಜಿಸಬೇಕೆಂದು ಇದರಿಂದ ನಮಗೆ ತಿಳಿಯುತ್ತದೆ, ಇಲ್ಲದಿದ್ದರೆ ಅವು ನಮ್ಮನ್ನು ನುಂಗಿಬಿಡುತ್ತವೆ. ಹಾಗೆಯೇ ಸದ್ಗುಣಗಳನ್ನು ಸದ್ ವಿಚಾರಗಳನ್ನು ನಮ್ಮಲ್ಲಿ ನಾವೇ

ಪ್ರಯತ್ನಪೂರ್ವಕವಾಗಿ ಬೆಳೆಸಿಕೊಳ್ಳಬೇಕು. ಅದರಿಂದ ನಮ್ಮ ಜೀವನವು ಯಶಸ್ಸಿನ ದಾರಿಯನ್ನು ಕಾಣುತ್ತದೆ.

ರಾವಣನು ಒಳ್ಳೆಯ ಕೆಲಸಗಳನ್ನು ಮುಂದೂಡದೆ, ತಕ್ಷಣವೇ ಮಾಡಬೇಕು ಎಂದು ಒತ್ತಿ ಹೇಳುತ್ತಾನೆ. ಇದು ಏಕೆ ಎಂಬ ಪ್ರಶ್ನೆ ಉದಯಿಸಬಹುದು. ಇದಕ್ಕೆ ಶ್ರೀಶಂಕರಾಚಾರ್ಯರು ತಮ್ಮ ಭಜ ಗೋವಿಂದಮ್ ಸ್ತೋತ್ರದಲ್ಲಿ ಹೇಳುತ್ತಾರೆ, "ಮುಂಜಾನೆ ಅರಳಿದ ಕಮಲದ ಎಸಳಿನ ತುದಿಯಲ್ಲಿ ಮಂಜಿನ ಹನಿಗಳು ನಿಂತಿರುತ್ತವೆ. ಗಾಳಿಯಿಂದ ಕಮಲದ ಎಲೆಗಳು ಅಲುಗಿದಾಗ, ಮಂಜಿನ ಹನಿಗಳು ನರ್ತನ ಗೈಯುತ್ತಿರುವೆವು ಎಂದು ತಿಳಿಯುವುವು. ಆದರೆ ಅವು ಯಾವ ಕ್ಷಣದಲ್ಲಾದರೂ ಬಿದ್ದುಬಿಡಬಹುದು. ಅವುಗಳು 'ನಾನು ಶಾಶ್ವತ' ಎಂಬಂತೆ ವರ್ತಿಸುತ್ತಿರುತ್ತವೆ. ಅದೇ ರೀತಿಯಲ್ಲಿ ನಮ್ಮ ಜೀವನವೂ ಕೂಡ." ಶಂಕರರು ಹೇಳುತ್ತಾರೆ, "ನಮ್ಮ ಜೀವನವು ಮಂಜಿನ ಹನಿಯಂತೆ ಕ್ಷಣಭಂಗುರ" ಎಂದು. ಯಾವ ಸಮಯದಲ್ಲಿ ಯಮಧರ್ಮರಾಯನು ನಮ್ಮನ್ನು ಸಮೀಪಿಸುತ್ತಾನೋ ನಮಗೆ ತಿಳಿಯದು. ಆದರೆ ನಾವು ಶಾಶ್ವತವಾಗಿ ಈ ಭೂಮಿಯಲ್ಲಿ ನೆಲೆಸಿರುತ್ತೇವೆ ಎಂದು ಭಾವಿಸಿ ಒಳ್ಳೆಯ ಕೆಲಸಗಳನ್ನು, ಸತ್ ಚಿಂತನೆಗಳನ್ನು ರಾವಣನಂತೆ ಮುಂದೆ ಹಾಕುತ್ತಲೇ ಇರುತ್ತೇವೆ. ಭಗವಾನ್ ಶಂಕರರು ಹೇಳುವಂತೆ, "ಯಾವ ಮಾನವನು ಜೀವನದ ನಶ್ವರತೆಯನ್ನು ಅರಿತು, ಜೀವನದ ಕ್ಷಣಭಂಗುರತೆಯನ್ನು ಅರಿತು ಆಗಿಂದಾಗಲೇ ಸತ್ಸಂಗವನ್ನು ಮಾಡುತ್ತಾನೋ, ಸತ್ಕಾರ್ಯಗಳನ್ನು ಆಚರಿಸುತ್ತಾನೋ, ಅವನು ಮೇಧಾವಿ, ಬುದ್ಧಿವಂತ. ಈ ಭವಸಾಗರವನ್ನು ಅವನು ದಾಟುತ್ತಾನೆ." ಹಳ್ಳಿಗಳ ಕಡೆ "ನಾಳೆ ಎಂದರೆ ಮನೆ ಹಾಳು" ಎಂದು ಹಿರಿಯರು ಕಿರಿಯರಿಗೆ ಹೇಳುತ್ತಾರೆ. ಅಂದರೆ ಸತ್ಕಾರ್ಯಗಳನ್ನು ನಾಳೆ ಎಂದು ಮುಂದೂಡದೆ, ಇಂದೇ ಮಾಡು ಎಂದರ್ಥ.

ಒಂದು ಕಥೆಯ ಮೂಲಕ ಈ ವಿಚಾರವನ್ನು ಮತ್ತಷ್ಟು ಚೆನ್ನಾಗಿ ತಿಳಿಯಬಹುದು. ಒಮ್ಮೆ ಒಂದಾನೊಂದು ಪಟ್ಟಣದಲ್ಲಿ ಒಬ್ಬ ಧನಿಕನು ಬಂಗಾರದ ವ್ಯಾಪಾರವನ್ನು ಮಾಡುತ್ತಿದ್ದ. ಆದರೆ ಅವನು ಬಹಳ ಜಿಪುಣ. ದಾನ-ಧರ್ಮಗಳನ್ನು, ಬಡವರಿಗೆ ಸಹಾಯವನ್ನು ಮಾಡಲು ಅವನ ಸ್ನೇಹಿತರು ಹುರಿದುಂಬಿಸುತ್ತಿದ್ದರು. ಅವನ ಮನಸ್ಸು ಕೂಡ ಈ ರೀತಿಯಾಗಿ ಹೇಳುತ್ತಿತ್ತು. ಆದರೆ ಹಣದ ವ್ಯಾಮೋಹದಿಂದಾಗಿ ಅವನು ಬಿಡಿಗಾಸನ್ನೂ ಬಿಚ್ಚುತ್ತಿರಲಿಲ್ಲ. ನಾಳೆ ಮಾಡುವ ಎಂದು ಮುಂದೂಡುತ್ತಿದ್ದ. ಅಲ್ಲದೆ ಬಡವರಿಗೆ ಸಾಲಗಳನ್ನು ಕೊಟ್ಟಾಗ, ಅವರು ಹಿಂದಿರುಗಿಸಲು ಸಾಧ್ಯವಾಗದಾಗ ಇವನು ಅವರ ಮನೆ-ಮಠಗಳನ್ನು ಬಲವಂತವಾಗಿ ಕಸಿದುಕೊಂಡು, ತನಗೆ ಬರಬೇಕಾದ ಹಣವನ್ನು ವಸೂಲಿ ಮಾಡುತ್ತಿದ್ದ. ಹೀಗೆಯೇ ಅವನ ಜೀವನಚಕ್ರ ಮುಂದೆ ಸಾಗಿತ್ತು. ಯಾರೊಬ್ಬರೂ ಅವನನ್ನು ಗೌರವದಿಂದ ಕಾಣುತ್ತಿರಲಿಲ್ಲ. ಅವನು ಜೀವನದ ಅಂತಿಮ ಘಟ್ಟವನ್ನು ತಲುಪಿದ. ವೃದ್ಧಾಪ್ಯದಿಂದಾಗಿ ಅವನ ಇಂದ್ರಿಯ, ಮನಸ್ಸಿನ ಶಕ್ತಿಗಳು ಕುಗ್ಗಿದವು. ಹಾಸಿಗೆಯ ಮೇಲೆ ಹೆಚ್ಚು ವಿಶ್ರಾಂತಿಯನ್ನು ಪಡೆಯುತ್ತಿದ್ದ. ಅವನ ಪುತ್ರರು ವ್ಯಾಪಾರವನ್ನು ನೋಡಿಕೊಳ್ಳುತ್ತಿದ್ದರು.

ಹೀಗಿರುವಾಗ ಅವನಿಗೆ ಒಂದು ಭಾವನೆಯು ಮನಸ್ಸಿನಲ್ಲಿ ಉದಯಿಸಿತು. ಅದೇನೆಂದರೆ, "ನಾನು ಇಷ್ಟೊಂದು ಧನ-ಕನಕಗಳನ್ನು ಸಂಪಾದಿಸಿದ್ದೇನೆ, ಈಗ ನಾನು ಸತ್ತರೆ, ಇದರಲ್ಲಿ ನಾನು ಒಂದು ಬಿಡಿಗಾಸನ್ನೂ ತೆಗೆದುಕೊಂಡು ಹೋಗಲಾಗುವುದಿಲ್ಲ. ಆದರೆ ನನ್ನ ಪಾಪಕರ್ಮಗಳ ಫಲವನ್ನು ನಾನು ಹೊತ್ತುಕೊಂಡು ಹೋಗಬೇಕಾಗಿದೆ. ನಾನು ದುಡಿದಿಟ್ಟಿರುವ ಹಣಕ್ಕೆ ಮಾತ್ರ ನನ್ನ ಮಕ್ಕಳು, ಹೆಂಡತಿ ಎಲ್ಲರೂ ಪಾಲುದಾರರಾಗುತ್ತಾರೆ. ಆದರೆ ನನ್ನ ಪಾಪದ ರಾಶಿಯಲ್ಲಿ ಯಾರೊಬ್ಬರೂ ಪಾಲುದಾರರಾಗುವುದಿಲ್ಲ. ಆದ್ದರಿಂದ ನನ್ನ ಪಾಪವನ್ನು ಕಡಿಮೆ ಮಾಡಿಕೊಳ್ಳಲು ಈಗಲಾದರೂ ಬಡವರಿಗೆ, ನಿರಾಶ್ರಿತರಿಗೆ ದಾನ-ಧರ್ಮಾದಿಗಳನ್ನು ಮಾಡಿ ಪುಣ್ಯವನ್ನು ಸಂಪಾದಿಸುವೆ, ಪಾಪದ ಸಂಪತ್ತನ್ನು ಕಡಿಮೆ ಮಾಡಿಕೊಳ್ಳುವೆ. ನನ್ನ ಹಿತೈಷಿಗಳು ಹೇಳಿದಂತಹ ಹಿತನುಡಿಗಳನ್ನು ಈಗಲಾದರೂ ಪಾಲಿಸೋಣ." ಆದರೆ ಅವನ ಜಿಪುಣತನ, ಹಣದ ಮೇಲಿದ್ದಂತಹ ವ್ಯಮೋಹವು ಇದಕ್ಕೆ ಅಡ್ಡಿಯುಂಟುಮಾಡಿತು. ಹೀಗೆ ಅವನಿಗೆ ಮನಸ್ಸಿನಲ್ಲಿ ಉಂಟಾದ ದ್ವಂದ್ವ, ತುಮುಲಗಳನ್ನು ಸರಿಪಡಿಸಿಕೊಳ್ಳಲು ಎರಡು-ಮೂರು ದಿನಗಳು ಬೇಕಾಯಿತು. ಅವನು ದಾನ-ಧರ್ಮಾದಿಗಳನ್ನು ಮಾಡಲು ಈಗ ನಿಶ್ಚಯಿಸಿದ್ದ. ಇದನ್ನು ತಿಳಿಸಲು ತನ್ನ ಮಕ್ಕಳನ್ನು ಕರೆ ಕಳಿಸಿದ. ಆದರೆ ಅವನ ಪಾಪದ ಫಲವೋ ಏನೋ ಎಂಬಂತೆ ಅವನಿಗೆ ಪಾರ್ಶ್ವವಾಯು ಉಂಟಾಗಿ ವಾಕ್‌ಶಕ್ತಿ ಕುಸಿದುಹೋಯಿತು.

ಮಕ್ಕಳು ತಮ್ಮ ತಂದೆಯ ಆಸೆಯನ್ನು ತಿಳಿಯಲು ಉತ್ಸುಕರಾಗಿ ಓಡಿ ಬಂದರು. ಆದರೆ ಅವನಿಂದ ಮಾತನಾಡಲು ಸಾಧ್ಯವಾಗಲಿಲ್ಲ. ಆಗ ಮಕ್ಕಳು ತಾಯಿಯನ್ನು ಕೇಳಿಕೊಂಡರು, "ಅಮ್ಮಾ, ತಂದೆಯ ಅಂತಿಮ ಬಯಕೆಯನ್ನು ಏನೆಂದು ತಿಳಿ, ಅದರಂತೆ ನಾವು ನಡೆದುಕೊಳ್ಳೋಣ. ಅವನ ಜೀವನದ ಕೊನೆಯ ದಿನಗಳು ನೆಮ್ಮದಿ ಹಾಗೂ ಶಾಂತಿಯಿಂದಿರಲಿ." ಇದನ್ನು ಕೇಳಿ ಆ ವ್ಯಾಪಾರಿಗೆ ತುಂಬಾ ಸಂತೋಷವಾಯಿತು. ಇಂತಹ ಸುಪುತ್ರರನ್ನು ಪಡೆದ ನಾನೇ ಧನ್ಯ ಎಂದು ತಿಳಿದು, ಹರ್ಷದಿಂದ ಅವನು ತನ್ನ ಹೆಂಡತಿಯ ಬಳಿ ಕಷ್ಟಪಟ್ಟು, ತೊದಲುತ್ತಾ, ತನ್ನ ಬಯಕೆಯನ್ನು ತಿಳಿಸಿದ. ಆದರೆ ಅವಳು ಅದನ್ನು ತನ್ನ ಮಕ್ಕಳಿಗೆ ಬಿಟ್ಟುಗೊಡಲಿಲ್ಲ. "ನನ್ನ ಗಂಡನು

ಸಾವನ್ನಪ್ಪುತ್ತಿರುವಾಗ ದಾನ-ಧರ್ಮಾದಿಗಳನ್ನು ಮಾಡಲು ಇಚ್ಛಿಸುತ್ತಿದ್ದಾನೆ. ಸುಮ್ಮನೆ ಏಕೆ ಹಣದ ಅಪವ್ಯಯ" ಎಂದು ಅವಳು ಚಿಂತಿಸಿದಳು.

ಹೆಂಡತಿಯ ಇಂಗಿತವನ್ನರಿತ ಧನಿಕನು ಪಶ್ಚಾತ್ತಾಪದಿಂದ ಪರಿತಪಿಸಿದ, "ಅಯ್ಯೋ! ನನ್ನ ಹಿತೈಷಿಗಳು, ಮಿತ್ರರು, ದಾನ-ಧರ್ಮಾದಿಗಳನ್ನು ಮಾಡು, ಸತ್ಕಾರ್ಯಗಳನ್ನು ಮಾಡು, ಹತ್ತು ಜನರಿಗೆ ಉಪಯೋಗವಾಗುವಂತಹ ಕೆಲಸ ಕಾರ್ಯಗಳನ್ನು ಕೈಗೊಳ್ಳು ಎಂದು ಹಿತನುಡಿ ಹೇಳಿದ್ದರು. ಅವರೆ ಅದನ್ನು ನಿರ್ಲಕ್ಷಿಸಿ ಮುಂದೂಡಿದೆ. ಈಗ ಮಾಡುವ ಹಂಬಲವಿದ್ದರೂ ಅದನ್ನು ಮಾಡಲಾಗುತ್ತಿಲ್ಲ. ನನ್ನ ಅರ್ಧಾಂಗಿಯೇ, ಧರ್ಮಪತ್ನಿಯೇ ನನ್ನ ಧರ್ಮಕಾರ್ಯಕ್ಕೆ ಅಡ್ಡಿ ಬರುತ್ತಿದ್ದಾಳೆ. ಹೇ ಭಗವಂತ! ನನ್ನ ತಪ್ಪನ್ನು ಕ್ಷಮಿಸು. ಈ ಕ್ಷಣದಲ್ಲಿ ಪಶ್ಚಾತ್ತಾಪದ ಪ್ರಾರ್ಥನೆಯೊಂದನ್ನು ಬಿಟ್ಟರೆ ನನ್ನ ಕೈಯಲ್ಲಿ ಏನೂ ಸಾಧ್ಯವಿಲ್ಲ. ಅಷ್ಟು ಕಷ್ಟಪಟ್ಟು ದುಡಿದ ಐಶ್ವರ್ಯವನ್ನು ಇನ್ನು ಮುಂದೆ ನನ್ನ ಹೆಂಡತಿ ಮತ್ತು ಮಕ್ಕಳು ಅನುಭವಿಸುತ್ತಾರೆ. ಆದರೆ ನಾನು ಪಾಪವೆಂಬ ಐಶ್ವರ್ಯವನ್ನು ಹೊತ್ತು ನಿನ್ನಲ್ಲಿಗೆ ಬರುತ್ತೇನೆ. ದಯವಿಟ್ಟು ನಿನ್ನ ವಿಶಾಲ ಹೃದಯದಿಂದ ನನ್ನನ್ನು ಕ್ಷಮಿಸು. ಮುಂದಿನ ಜನ್ಮದಲ್ಲಾದರೂ ಸತ್ಕಾರ್ಯಗಳನ್ನು ಮಾಡುತ್ತೇನೆ, ಮಾಡಲು ಶಕ್ತಿ ಕೊಡು."

ಜೀವನದಲ್ಲಿ ಇದೇ ರೀತಿಯ ಸಂದರ್ಭಗಳು ಹೆಚ್ಚು. ಭಗವಾನ್ ಶಂಕರರು ಹೇಳುವಂತೆ, ಬಾಲ್ಯದ ಸಮಯದಲ್ಲಿ ಕ್ರೀಡಾಸಕ್ತರಾಗಿ, ಯೌವನದಲ್ಲಿ ಕಾಮಭಾವನೆಯಲ್ಲಿ ಆಸಕ್ತರಾಗಿ, ಮುಂದೆ ಹಣದಲ್ಲಿ ಆಸಕ್ತರಾಗಿರುತ್ತೇವೆ. ಹಾಗಾಗಿ ಒಳ್ಳೆಯ ಚಿಂತನೆಗಳನ್ನು ಮಾಡಲು ಸಮಯವಿರುವುದಿಲ್ಲ. ಒಳ್ಳೆಯ ಕೆಲಸಗಳನ್ನು ನಮ್ಮ ಜೀವನದ ಅಂತಿಮ ಸಮಯದಲ್ಲಿ ಮಾಡೋಣ ಎಂದು ಮುಂದೂಡುತ್ತೇವೆ. ಆದರೆ ಆ ಧನಿಕನಂತೆ ನಾವು ಮಾಡಬೇಕೆಂಬ ಆಸಕ್ತಿಯನ್ನು ಹೊಂದಿದ್ದರೂ, ಮಾಡಲು ಅಸಮರ್ಥರಾಗುತ್ತೇವೆ. ಆದ್ದರಿಂದ ರಾವಣನು ಹೇಳಿದಂತೆ, ಸತ್ಕಾರ್ಯಗಳನ್ನು, ಸತ್ ಚಿಂತನೆಗಳನ್ನು ಆಗಿಂದಾಗಲೇ ಮಾಡಿ ನಮ್ಮ ಜೀವನವನ್ನು ಸಾರ್ಥಕಗೊಳಿಸಿ ಕೊಳ್ಳೋಣ, ಸದ್ಗುಣಿಗಳಾಗೋಣ. ಧರ್ಮವನ್ನು ಆಚರಿಸುತ್ತಾ, ಧರ್ಮದ ಮೂಲಕ ಅರ್ಥ-ಕಾಮಗಳನ್ನು ಅನುಭವಿಸಿ ಮೋಕ್ಷಕ್ಕೆ ನಾವೆಲ್ಲರೂ ಅಧಿಕಾರಿಗಳಾಗೋಣ. ಪರಮಹಂಸರು ಹೇಳಿದಂತೆ ಮಾನವಜನ್ಮದ ಗುರಿಯಾದ ಪರಮಪದವನ್ನು ಹೊಂದೋಣ.

ಧಾರ್ಮಿಕ ಜೀವನವೆಂದರೆ ಇತರರ ಕಷ್ಟದುಃಖಗಳಿಗೆ ಸ್ಪಂದಿಸುವ ಹೃದಯಸಂಪನ್ನತೆ. ಅದು ನಮಗೆ ಭಗವಂತನ ಸಾನ್ನಿಧ್ಯವನ್ನು, ಪ್ರೀತಿಯ ಅನುಭೂತಿಯನ್ನು ತರುವುದರಲ್ಲಿ ಸಂದೇಹವೇ ಇಲ್ಲ. ಪ್ರಸಿದ್ಧವಾದ **ಭದ್ರಂ ಕರ್ಣೇಭಿಃ** ಎಂಬ ಶಾಂತಿಮಂತ್ರವು ಇದೇ ಭಾವನೆಯನ್ನು ಪ್ರತಿಬಿಂಬಿಸುತ್ತದೆ.

"ಓಂ, ಹೇ ಜ್ಯೋತಿಸ್ವರೂಪಿಗಳಾದ ದೇವತೆಗಳೆ, ಮಂಗಳಕರವಾದುದನ್ನು ನಮ್ಮ ಕಿವಿಗಳು ಕೇಳಲಿ, ಹೇ ಪೂಜಾರ್ಹರೆ, ಪವಿತ್ರವಾದುದನ್ನು ನಮ್ಮ ಕಣ್ಣುಗಳು ನೋಡಲಿ; ನಿಮ್ಮನ್ನು ನಾವು ಸ್ತುತಿಸುತ್ತಾ, ದೇವರು ಕೊಟ್ಟಿರುವ ಆಯಸ್ಸನ್ನು ಆರೋಗ್ಯವಂತರಾಗಿ ದೃಢಕಾಯರಾಗಿ ಕಳೆಯುವಂತಾಗಲಿ."

**ಓಂ ಶಾಂತಿಃ ಶಾಂತಿಃ ಶಾಂತಿಃ** ✪

### ಬಾಲ್ಯ ಸ್ನೇಹಿತರು

ಬಾಲ್ಯದಿಂದಲೇ ಸ್ನೇಹಿತರಾಗಿದ್ದ ಇಬ್ಬರು ವ್ಯಕ್ತಿಗಳು ಬಹಳ ವರ್ಷಗಳ ನಂತರ ಒಂದು ನಗರದ ನ್ಯಾಯಾಲಯದಲ್ಲಿ ಭೇಟಿಯಾದರು. ಒಬ್ಬ ನ್ಯಾಯಾಧೀಶನ ಸ್ಥಾನದಲ್ಲಿದ್ದ, ಮತ್ತೊಬ್ಬ ಅಪರಾಧಿಯ ಸ್ಥಾನದಲ್ಲಿ! ವಾದವಿವಾದಗಳನ್ನು ಕೇಳಿಯಾದ ಮೇಲೆ ಅಪರಾಧಿಗೆ ಶಿಕ್ಷೆ ವಿಧಿಸಬೇಕೆಂದು ತೀರ್ಮಾನವಾಯಿತು. ಹಳೆಯ ಸ್ನೇಹಿತನಾದ್ದರಿಂದ ಶಿಕ್ಷೆ ವಿಧಿಸಬಾರದು ಎಂದು ಪ್ರತಿವಾದಿ ಕೇಳಿಕೊಂಡರು.

"ಇಲ್ಲ, ಹಾಗೆಂದಿಗೂ ಮಾಡಲಾಗದು. ನ್ಯಾಯವನ್ನು ಕಾಪಾಡಲೇಬೇಕು, ಕಾನೂನನ್ನು ಉಲ್ಲಂಘಿಸಬಾರದು" ಎನ್ನುತ್ತಾ ನ್ಯಾಯಾಧೀಶ, "ಐದು ಸಾವಿರ ದಂಡ ಅಥವಾ ಹದಿನಾಲ್ಕು ದಿವಸಗಳ ಕಠಿಣ ಬಂಧನ" ಶಿಕ್ಷೆಯನ್ನು ವಿಧಿಸಿದರು.

ಅಪರಾಧಿಯ ಬಳಿ ಬಿಡಿಗಾಸೂ ಇರಲಿಲ್ಲ. ಜೈಲುವಾಸ ಅನಿವಾರ್ಯವಾಗಿತ್ತು. ನ್ಯಾಯಾಧೀಶ ತಮ್ಮ ಕೆಲಸವನ್ನು ಮುಗಿಸಿ, ನ್ಯಾಯ ಪೀಠದಿಂದ ಕೆಳಗಿಳಿದು ಬಂದು, ದಂಡದ ಶುಲ್ಕವನ್ನು ತಾವೇ ತೆತ್ತು, ಸ್ನೇಹಿತನ ಹೆಗಲ ಮೇಲೆ ಕೈಯಿಟ್ಟು ಹೇಳಿದರು, "ಕಿಟ್ಟು, ಈಗ ನನ್ನ ಮನೆಗೆ ಊಟಕ್ಕೆ ನಡೆ."

### ಶಿಲಾಪ್ರತಿಮೆ

ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ, ಸರ್ದಾರ್ ವಲ್ಲಭ ಭಾಯ್ ಪಟೇಲರ ಅಭಿಮಾನಿಗಳು, ಅವರ ಬಳಿ ಹೋಗಿ "ನಿಮ್ಮ ಶಿಲಾಪ್ರತಿಮೆಯನ್ನು ಪ್ರತಿಷ್ಠಾಪಿಸಲು ತೀರ್ಮಾನಿಸಿದ್ದೇವೆ. ನಿಮ್ಮ ಒಪ್ಪಿಗೆ ಬೇಕು" ಎಂದರು.

ಅದಕ್ಕೆ ತಟ್ಟನೆ ಸರ್ದಾರ್ ಪಟೇಲರು, "ಕೆಲವು ವರ್ಷಗಳ ನಂತರ, 'ಜನ ಯಾರಿವನು? ದೇಶಕ್ಕೆ ಏನು ಮಾಡಿದ್ದಾನೆ? ಇವನ ಶಿಲಾಪ್ರತಿಮೆ ಏಕೆ ನಿಲ್ಲಿಸಿದ್ದೀರಿ' ಎಂದು ಕೇಳಕೂಡದು. 'ದೇಶಸೇವೆ ಮಾಡಿದ ಸರ್ದಾರ್ ಪಟೇಲ್‌ರ ಶಿಲಾವಿಗ್ರಹ ಎಲ್ಲೂ ಕಾಣುತ್ತಿಲ್ಲವಲ್ಲ, ಏಕೆ? ಎಂದು ಪ್ರಶ್ನಿಸುವಂತಾಗಬೇಕು.'" ಎಂದರಂತೆ. ✪